



Hanuman Chalisa Path
"Divine Chants • Infinite Blessings"

# ಶ್ರೀ ಹನುಮಾನ್ ಚಾಲೀಸಾ ಅರ್ಥಪೂರ್ಣ ಕನ್ನಡ

## ದೋಹಾ

**ಶ್ರೀ ಗುರು ಚರಣ ಸರೋಜ ರಜ ನಿಜಮನ ಮುಕುರ ಸುಧಾರಿ**
**ವರಣೌ ರಘುವರ ವಿಮಲ ಯಶ ಜೋ ದಾಯಕ ಫಲಚಾರಿ ॥**

ಅರ್ಥ : ಶ್ರೀ ಗುರುವಿನ ಪಾದಕಮಲಗಳ ಧೂಳಿನಿಂದ ನನ್ನ ಮನಸ್ಸೆಂಬ ಕನ್ನಡಿಯನ್ನು ಬೆಳಗಿ, ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ನೀಡುವ ಶ್ರೀ ರಘುರಾಮನ ವಿಮಲ ಚರಿತ್ರೆಯನ್ನು ವರ್ಣಿಸುವೆನು

**ಬುದ್ಧಿಹೀನ ತನು ಜಾನಿಕೇ ಸುಮಿರೌ ಪವನಕುಮಾರ**
**ಬಲ ಬುದ್ಧಿ ವಿದ್ಯಾ ದೇಹು ಮೋಹಿ ಹರಹು ಕಲೇಶ ವಿಕಾರ ॥**

ಅರ್ಥ : ಪವನಕುಮಾರನೇ ನನ್ನನ್ನು ಬುದ್ಧಿಹೀನನೆಂದು ತಿಳಿದು ನನಗೆ ಬಲ ಬುದ್ಧಿ ವಿದ್ಯೆಗಳನ್ನು ನೀಡಿ ನನ್ನಲ್ಲಿರುವ ದೋಷಗಳನ್ನು ಕಷ್ಟಗಳನ್ನು ಪರಿಹರಿಸು

## ಚೌಪಾಈ

**ಜಯ ಹನುಮಾನ ಜ್ಞಾನಗುಣಸಾಗರ ।**
**ಜಯ ಕಪೀಶ ತಿಹು ಲೋಕ ಉಜಾಗರ ॥ ೧ ॥**

ಅರ್ಥ : ಜ್ಞಾನ ಗುಣಸಾಗರನಾದ ಹನುಮಂತನೇ ನಿನಗೆ ಜಯವಾಗಲಿ, ಮೂರು ಲೋಕಗಳನ್ನು ಜ್ಞಾನದಿಂದ ಬೆಳಗುವ ನಿನಗೆ ಜಯವಾಗಲಿ

**ರಾಮದೂತ ಅತುಲಿತ ಬಲಧಾಮಾ ।**
**ಅಂಜನಿಪುತ್ರ ಪವನಸುತ ನಾಮಾ ॥ ೨ ॥**

ಅರ್ಥ : ರಾಮದೂತನೇ ಅಪರಿಮಿತ ಬಲವುಳ್ಳವನೇ ಅಂಜನಿದೇವಿಯ ಪುತ್ರನೇ ಪವನಸುತನೇ

HanumanChalisaPath.CoM

**ಮಹಾವೀರ ವಿಕ್ರಮ ಬಜರಂಗೀ ।**
**ಕುಮತಿ ನಿವಾರ ಸುಮತಿ ಕೇ ಸಂಗೀ ॥ ೩ ॥**

ಅರ್ಥ : ಮಹಾವೀರನೇ, ವಿಕ್ರಮನೇ ವಜ್ರಾಂಗನೇ, ನೀನು ದುರ್ಬುದ್ಧಿಯನ್ನು ಹೋಗಲಾಡಿಸಿ ಸುಬುದ್ಧಿಯನ್ನು ಕೊಡುವವನು

Downloaded From HanumanChalisaPath.CoM

**ಕಂಚನ ವರಣ ವಿರಾಜ ಸುವೇಶಾ ।**
**ಕಾನನ ಕುಂಡಲ ಕುಂಚಿತ ಕೇಶಾ ॥ ೪ ॥**

**ಅರ್ಥ :** ನೀನು ಚಿನ್ನದಂತಹ ಮೈಬಣ್ಣವುಳ್ಳವನು, ನಿನ್ನ ಕಿವಿಯಲ್ಲಿ ಕುಂಡಲಗಳು, ನಿನ್ನದು ಗುಂಗುರು ಕೂದಲು, ಉತ್ತಮ ವೇಷ ಧರಿಸಿ ಶೋಭಿಸುತ್ತಿರುವೆ

HanumanChalisaPath.CoM

**ಹಾಥ ವಜ್ರ ಔರು ಧ್ವಜಾ ವಿರಾಜೈ।**
**ಕಾಂಥೇ ಮೂಂಜ ಜನೇವೂ ಸಾಜೈ॥ ೫ ॥**

**ಅರ್ಥ :** ನಿನ್ನ ಕೈಯಲ್ಲಿ ವಜ್ರಾಯುಧ ಮತ್ತು ಧ್ವಜವು ರಾರಾಜಿಸುತ್ತಿದೆ. ಹೆಗಲಿಂದ ಕೆಳಗೆ ಮೂಂಜಿ ಹಾಗೂ ಜನಿವಾರಗಳಿವೆ

**ಶಂಕರ ಸುವನ ಕೇಸರೀನಂದನ ।**
**ತೇಜ ಪ್ರತಾಪ ಮಹಾ ಜಗವಂದನ ॥ ೬ ॥**

**ಅರ್ಥ :** ನೀನು ರುದ್ರಾಂಶ ಸಂಭೂತ ಹಾಗೂ ವಾನರರಸ ಕೇಸರಿಯ ಮಗನು, ತೇಜೋವಂತನಾಗಿ ಪ್ರತಾಪಿಯಾಗಿ ಇಡೀ ಜಗತ್ತಿನಿಂದ ವಂದ್ಯನು

**ವಿದ್ಯಾವಾನ ಗುಣೀ ಅತಿಚಾತುರ ।**
**ರಾಮ ಕಾಜ ಕರಿವೇ ಕೋ ಆತುರ ॥ ೭ ॥**

**ಅರ್ಥ :** ನೀನು ಗುಣವಂತನು, ವಿದ್ಯಾವಂತನು ಅತ್ಯಂತ ಚತುರನು, ರಾಮ ಕಾರ್ಯವನ್ನು ಮಾಡಿ ಮುಗಿಸಲು ಸದಾ ಆತುರ ಪಡುವವನು

**ಪ್ರಭು ಚರಿತ್ರ ಸುನಿವೇ ಕೋ ರಸಿಯಾ ।**
**ರಾಮ ಲಖನ ಸೀತಾ ಮನ ಬಸಿಯಾ ॥ ೮ ॥**

**ಅರ್ಥ :** ಶ್ರೀರಾಮಚಂದ್ರನ ಚರಿತೆಯನ್ನು ಆಲಿಸುವುದರಲ್ಲಿ ನಿನಗೆ ಆನಂದ. ಶ್ರೀರಾಮ, ಲಕ್ಷ್ಮಣ, ಸೀತೆ ನಿನ್ನ ಮನಸ್ಸಿನಲ್ಲಿ ನೆಲಸಿ ಬಿಟ್ಟಿದ್ದಾರೆ

**ಸೂಕ್ಷ್ಮರೂಪ ಧರಿ ಸಿಯಹಿ ದಿಖಾವಾ ।**
**ವಿಕಟರೂಪ ಧರಿ ಲಂಕ ಜರಾವಾ ॥ ೯ ॥**

**ಅರ್ಥ :** ನೀನು ಸೂಕ್ಷ್ಮರೂಪ ಧರಿಸಿಕೊಂಡು ಸೀತೆಗೆ ಕಾಣಿಸಿಕೊಂಡೆ ಅದೇ ಭಯಂಕರ ರೂಪವನ್ನು ಧಾರಣ ಮಾಡಿಕೊಂಡು ಲಂಕೆಯನ್ನು ಸುಟ್ಟೆ

HanumanChalisaPath.CoM

**ಭೀಮರೂಪ ಧರಿ ಅಸುರ ಸಂಹಾರೇ ।**
**ರಾಮಚಂದ್ರ ಕೇ ಕಾಜ ಸಂವಾರೇ ॥ ೧೦ ॥**

**ಅರ್ಥ :** ನೀನು ಬೃಹದಾಕಾರ ಧರಿಸಿ ಅಸುರರನ್ನು ಸಂಹರಿಸಿದೆ, ಶ್ರೀರಾಮ ಚಂದ್ರನ ಕಾರ್ಯವನ್ನು ಸಾಂಗಗೊಳಿಸಿದೆ

Downloaded From HanumanChalisaPath.CoM

**ಲಾಯ ಸಂಜೀವನ ಲಖನ ಜಿಯಾಯೇ ।**
**ಶ್ರೀರಘುವೀರ ಹರಷಿ ವುರ ಲಾಯೇ ॥ ೧೧ ॥**

**ಅರ್ಥ :** ಸಂಜೀವಿನಿಯನ್ನು ತಂದು ಲಕ್ಷ್ಮಣನನ್ನು ಬದುಕಿಸಿಕೊಂಡೆ. ಶ್ರೀ ರಘುನಾಥನು ಸಂತಸದಿಂದ ನಿನ್ನನ್ನು ಆಲಂಗಿಸಿಕೊಂಡನು

HanumanChalisaPath.CoM

**ರಘುಪತಿ ಕೀನ್ಹೀ ಬಹುತ ಬಡಾಯೀ ।**
**ತುಮ ಮಮ ಪ್ರಿಯ ಭರತ ಸಮ ಭಾಯೀ ॥ ೧೨ ॥**

**ಅರ್ಥ :** ನೀನು ನನ್ನ ಸೋದರ ಭರತನಷ್ಟೇ ನನಗೆ ಪ್ರಿಯನು ಎಂದು ಶ್ರೀ ರಾಮಚಂದ್ರನು ನಿನ್ನನ್ನು ಬಹುವಾಗಿ ಹೊಗಳಿದ್ದಾನೆ

**ಸಹಸ ವದನ ತುಮ್ಹರೋ ಯಶ ಗಾವೈ।**
**ಅಸ ಕಹಿ ಶ್ರೀಪತಿ ಕಂಠ ಲಗಾವೈ॥ ೧೩ ॥**

**ಅರ್ಥ :** ಆದಿಶೇಷನು ಸಹಸ್ರ ಮುಖಗಳಿಂದ ನಿನ್ನ ಕೀರ್ತಿಯನ್ನು ಹಾಡಿ ಹೊಗಳುತ್ತಾನೆ ಎನ್ನುತ್ತಾ ಶ್ರೀಪತಿಯ ನಿನ್ನನ್ನು ಆಲಂಗಿಸಿಕೊಳ್ಳುತ್ತಾನೆ

**ಸನಕಾದಿಕ ಬ್ರಹ್ಮಾದಿ ಮುನೀಶಾ ।**
**ನಾರದ ಶಾರದ ಸಹಿತ ಅಹೀಶಾ ॥ ೧೪ ॥**

**ಅರ್ಥ :** ಸನಕಾದಿ ಋಷಿವರ್ಯರು, ಬ್ರಹ್ಮಾದಿಗಳು, ನಾರದರು, ಸರಸ್ವತಿಯೂ ಆದಿಶೇಷನು

**ಯಮ ಕುಬೇರ ದಿಗಪಾಲ ಜಹಾಂ ತೇ ।**
**ಕವಿ ಕೋವಿದ ಕಹಿ ಸಕೇ ಕಹಾಂ ತೇ ॥ ೧೫ ॥**

**ಅರ್ಥ :** ಯಮನು ಕುಬೇರನು ದಿಕ್ಪಾಲರು ಕವಿಕೋವಿದರು ನಿನ್ನ ಮಹಿಮೆಯನ್ನು ಎಷ್ಟೆಂದು ವರ್ಣಸಿಯರು

**ತುಮ ಉಪಕಾರ ಸುಗ್ರೀವಹಿ ಕೀನ್ಹಾ।**
**ರಾಮ ಮಿಲಾಯ ರಾಜ ಪದ ದೀನ್ಹಾ॥ ೧೬ ॥**

**ಅರ್ಥ :** ನೀನು ಸುಗ್ರೀವನಿಗೆ ಉಪಕಾರವನ್ನು ಮಾಡಿದೆ. ರಾಮನ ಸಖ್ಯ ಮಾಡಿಸಿ ಅವನಿಗೆ ರಾಜ್ಯ ಪದವಿ ಸಿಗುವಂತೆ ಮಾಡಿದೆ

HanumanChalisaPath.CoM

**ತುಮ್ಹರೋ ಮಂತ್ರ ವಿಭೀಷಣ ಮಾನಾ ।**
**ಲಂಕೇಶ್ವರ ಭಯ ಸಬ ಜಗ ಜಾನಾ ॥ ೧೭ ॥**

**ಅರ್ಥ :** ನೀನು ಕೊಟ್ಟ ಸಲಹೆಯನ್ನು ವಿಭೀಷಣನು ಪಾಲಿಸಿದನು. ಆದರಿಂದಲೇ ಅವನು ಲಂಕಾಧಿಪತಿಯಾದನೆಂಬುದನ್ನು ಇಡೀ ಜಗತ್ತೇ ಬಲ್ಲದು

Downloaded From HanumanChalisaPath.CoM

**ಯುಗ ಸಹಸ್ರ ಯೋಜನ ಪರ ಭಾನೂ ।**
**ಲೀಲ್ಯೋ ತಾಹಿ ಮಧುರ ಫಲ ಜಾನೂ ॥ ೧೮ ॥**

**ಅರ್ಥ :** ಎರಡು ಸಹಸ್ರ ಯೋಜನ ದೂರವಿದ್ದ ಸೂರ್ಯವನ್ನು ಮಧುರ ಫಲವೆಂದು ತಿಳಿದು ಅವನೆಡೆಗೆ ಹಾರಿದೆ

**ಪ್ರಭು ಮುದ್ರಿಕಾ ಮೇಲಿ ಮುಖ ಮಾಹೀ ।**
**ಜಲಧಿ ಲಾಂಘಿ ಗಯೇ ಅಚರಜ ನಾಹೀ ॥ ೧೯ ॥**

**ಅರ್ಥ :** ಶ್ರೀರಾಮಚಂದ್ರನಿತ್ತ ಮುದ್ರಿಕೆಯನ್ನು ಬಾಯಲ್ಲಿಟ್ಟು ನೀನು ಸಮುದ್ರದ ಮೇಲೆ ಹಾರುತ್ತಾ ಅದನ್ನು ದಾಟಿದೆ ಅಂದರೆ ಇದರಲ್ಲಿ ಏನೂ ಅಶ್ಚರ್ಯವಿಲ್ಲ

HanumanChalisaPath.CoM

**ದುರ್ಗಮ ಕಾಜ ಜಗತ ಕೇ ಜೇತೇ ।**
**ಸುಗಮ ಅನುಗ್ರಹ ತುಮ್ಹರೇ ತೇತೇ ॥ ೨೦ ॥**

**ಅರ್ಥ :** ಪ್ರಪಂಚದಲ್ಲಿ ದುರ್ಗಮ ಎನಿಸುವ ಎಷ್ಟೆಲ್ಲಾ ಕಾರ್ಯಗಳು ಇವೆಯೋ ಅವೆಲ್ಲ ನಿನ್ನ ಅನುಗ್ರಹವಾದ ಕಾರಣ ಸುಲಭವೆನಿಸುತ್ತವೆ

Downloaded From HanumanChalisaPath.CoM

**ರಾಮ ದುವಾರೇ ತುಮ ರಖವಾರೇ ।**
**ಹೋತ ನ ಆಜ್ಞಾ ಬಿನು ಪೈಸಾರೇ ॥ ೨೧ ॥**

**ಅರ್ಥ :** ನೀನು ರಾಮನ ಮನೆಯ ಬಾಗಿಲನ್ನು ಕಾಯುವವನು ನಿನ್ನ ಅನುಮತಿಯಿಲ್ಲದೆ ಅಲ್ಲಿಗೆ ಯಾರಿಗೂ ಪ್ರವೇಶವಿಲ್ಲ

**ಸಬ ಸುಖ ಲಹೈ ತುಮ್ಹಾರೀ ಶರಣಾ ।**
**ತುಮ ರಕ್ಷಕ ಕಾಹೂ ಕೋ ಡರನಾ ॥ ೨೨ ॥**

**ಅರ್ಥ :** ನಿನ್ನಲ್ಲಿ ಶರಣು ಬಂದವರಿಗೆ ಸಕಲ ಸುಖಗಳು ಲಭಿಸುತ್ತವೆ. ನೀನೇ ರಕ್ಷಕನಾದರೆ ಯಾರಿಗೂ ಭಯ ಪಡಬೇಕಾದುದಿಲ್ಲ

**ಆಪನ ತೇಜ ಸಂಹಾರೋ ಆಪೈ।**
**ತೀನೋಂ ಲೋಕ ಹಾಂಕ ತೇಂ ಕಾಂಪೈ॥ ೨೩ ॥**

**ಅರ್ಥ :** ನಿನ್ನ ತೇಜಸ್ಸನ್ನು ನೀನೇ ನಿಗ್ರಹಿಸಿಕೋ ನಿನ್ನ ಒಂದು ಗರ್ಜನೆಯಿಂದ ಮೂರು ಲೋಕಗಳು ನಡುಗುತ್ತವೆ

HanumanChalisaPath.CoM

**ಭೂತ ಪಿಶಾಚ ನಿಕಟ ನಹಿಂ ಆವೈ।**
**ಮಹಾವೀರ ಜಬ ನಾಮ ಸುನಾವೈ॥ ೨೪ ॥**

**ಅರ್ಥ :** ನಿನ್ನನ್ನು ಸ್ಮರಿಸಿದ ಮಾತ್ರದಿಂದ ಭೂತ ಪಿಶಾಚಿಗಳು ಹತ್ತಿರ ಸುಳಿಯುವುದಿಲ್ಲ

**ನಾಸೈರೋಗ ಹರೈಸಬ ಪೀರಾ ।**
**ಜಪತ ನಿರಂತರ ಹನುಮತ ವೀರಾ ॥ ೨೫ ॥**

ಅರ್ಥ : ವೀರನಾದ ಹನುಮಂತನೇ ನಿನ್ನ ನಾಮವನ್ನು ನಿರಂತರ ಜಪಿಸುವುದರಿಂದ ಸಕಲ ರೋಗಗಳು ದೂರಾಗುತ್ತವೆ, ಎಲ್ಲ ಕಷ್ಟಗಳು ಕಳೆಯುತ್ತವೆ.

HanumanChalisaPath.CoM

**ಸಂಕಟಸೇ ಹನುಮಾನ ಛುಡಾವೈ।**
**ಮನ ಕ್ರಮ ವಚನ ಧ್ಯಾನ ಜೋ ಲಾವೈ॥ ೨೬ ॥**

ಅರ್ಥ : ಮನಸಾ ವಾಚಾ ಕರ್ಮಣಾ ಯಾರು ಹನುಮಂತನನ್ನು ಸ್ಮರಿಸುತ್ತಾರೋ ಅವರ ಸಂಕಷ್ಟಗಳನ್ನು ದೂರ ಮಾಡುತ್ತಾನೆ

**ಸಬ ಪರ ರಾಮ ತಪಸ್ವೀ ರಾಜಾ ।**
**ತಿನ ಕೇ ಕಾಜ ಸಕಲ ತುಮ ಸಾಜಾ ॥ ೨೭ ॥**

ಅರ್ಥ : ಯಾರೇ ಆಗಲಿ ರಾಮನ ಭಕ್ತರಾದರೆ ಅವರ ಕಾರ್ಯಗಳನ್ನು ನೀನೇ ಸಾಂಗಗೊಳಿಸುತ್ತಿಯೇ

**ಔರ ಮನೋರಥ ಜೋ ಕೋಯೀ ಲಾವೈ।**
**ತಾಸು ಅಮಿತ ಜೀವನ ಫಲ ಪಾವೈ॥ ೨೮ ॥ [** ಸೋಯಿ **]**

ಅರ್ಥ : ಇನ್ನ್ಯಾವುದೇ ಮನೋರಥವನ್ನು ಹನುಮಂತನಲ್ಲಿ ಹೇಳಿಕೊಂಡರೆ ಅವರಿಗೆ ಜೀವನದ ಎಲ್ಲ ಫಲಗಳು ದೊರಕುತ್ತವೆ

**ಚಾರೋಂ ಯುಗ ಪ್ರತಾಪ ತುಮ್ಹಾರಾ ।**
**ಹೈ ಪರಸಿದ್ಧ ಜಗತ ಉಜಿಯಾರಾ ॥ ೨೯ ॥**

ಅರ್ಥ : ನಿನ್ನ ಪ್ರತಾಪವು ಚತುರ್ಯುಗಗಳಲ್ಲಿ ಹರಡಿದೆ. ನಿನ್ನ ಯಶೋ ಕೀರ್ತಿಯು ಜಗತ್ಪ್ರಸಿದ್ಧವಾದುದು

**ಸಾಧುಸಂತಕೇ ತುಮ ರಖವಾರೇ ।**
**ಅಸುರ ನಿಕಂದನ ರಾಮ ದುಲಾರೇ ॥ ೩೦ ॥**

ಅರ್ಥ : ನೀನು ಸಾಧು ಸಂತರ ರಕ್ಷಕನು, ರಾಕ್ಷಸರನ್ನು ಸಂಹರಿಸಿದ ರಾಮ ಪ್ರಿಯನು

HanumanChalisaPath.CoM

**ಅಷ್ಟ ಸಿದ್ಧಿ ನವ ನಿಧಿ ಕೇ ದಾತಾ ।**
**ಅಸವರ ದೀನ್ಹ ಜಾನಕೀ ಮಾತಾ ॥ ೩೧ ॥**

ಅರ್ಥ : ಜಾನಕಿಮಾತೆಯು ನೀನು ಅಷ್ಟ ಸಿದ್ಧಿಗಳನ್ನು ನವನಿಧಿಗಳನ್ನು ಕೊಡುವವನಾಗು ಎಂದು ವರವನ್ನು ನೀಡಿದಳು

Downloaded From HanumanChalisaPath.CoM

**ರಾಮ ರಸಾಯನ ತುಮ್ಹರೇ ಪಾಸಾ ।**
**ಸದಾ ರಹೋ ರಘುಪತಿ ಕೇ ದಾಸಾ ॥ ೩೨ ॥**

**ಅರ್ಥ :** ರಾಮಭಕ್ತಿ ಎಂಬ ರಸಾಯನ ನಿನ್ನ ಬಳಿಯಿದೆ. ನೀನು ಸದಾ ಕಾಲ ರಘುನಾಥನ ದಾಸನಾಗಿರು

**ತುಮ್ಹರೇ ಭಜನ ರಾಮ ಕೋ ಪಾವೈ।**
**ಜನ್ಮ ಜನ್ಮ ಕೇ ದುಖ ಬಿಸರಾವೈ॥ ೩೩ ॥**

**ಅರ್ಥ :** ನಿನ್ನ ಸ್ಮರಣೆ ಮಾಡಿದರೆ ಶ್ರೀರಾಮನೇ ನಮಗೆ ಲಭ್ಯವಾಗುತ್ತಾನೆ. ಜನ್ಮ ಜನ್ಮಾಂತರಗಳ ದು:ಖವನ್ನು ಮರೆಸುತ್ತಾನೆ

HanumanChalisaPath.CoM

**ಅಂತಕಾಲ ರಘುಪತಿ ಪುರ ಜಾಯೀ । [** ರಘುವರ **]**
**ಜಹಾಂ ಜನ್ಮಿ ಹರಿಭಕ್ತ ಕಹಾಯೀ ॥ ೩೪ ॥**

**ಅರ್ಥ :** ಅಂತ್ಯಕಾಲ ಬಂದಾಗ ರಘುನಾಥನ ನಗರಿಯಲ್ಲಿ ಜನ್ಮಿಸಿ ಹರಿಭಕ್ತನೆಂಬ ಕೀರ್ತಿಯನ್ನು ಪಡೆಯುತ್ತಾನೆ

Downloaded From HanumanChalisaPath.CoM

**ಔರ ದೇವತಾ ಚಿತ್ತ ನ ಧರಯೀ ।**
**ಹನುಮತ ಸೇಯಿ ಸರ್ವಸುಖಕರಯೀ ॥ ೩೫ ॥**

**ಅರ್ಥ :** ಉಳಿದ್ಯಾವ ದೇವತೆಗಳನ್ನು ಮನಸ್ಸಿಗೆ ತಾರದೆ, ಹನುಮಂತನನ್ನು ಸೇವಿಸಿ ಸಕಲ ಸುಖಗಳನ್ನು ಪಡೆಯುತ್ತಾರೆ

**ಸಂಕಟ ಹರೈ ಮಿಟೈ ಸಬ ಪೀರಾ ।**
**ಜೋ ಸುಮಿರೈ ಹನುಮತ ಬಲವೀರಾ ॥ ೩೬ ॥**

**ಅರ್ಥ :** ಮಹಾವೀರನಾದ ಹನುಮಂತನನ್ನು ಸ್ಮರಿಸುವುದರಿಂದ ಎಲ್ಲ ಸಂಕಷ್ಟಗಳು ನೋವುಗಳು ಪರಿಹಾರವಾಗುತ್ತವೆ

**ಜೈ ಜೈ ಜೈ ಹನುಮಾನ ಗೋಸಾಯೀ ।**
**ಕೃಪಾ ಕರಹು ಗುರು ದೇವ ಕೀ ನಾಯೀ ॥ ೩೭ ॥**

**ಅರ್ಥ :** ಹನುಮಂತ ದೇವರೇ ನಿನಗೆ ಜಯವಾಗಲಿ. ಗುರುದೇವನಂತೆ ನಮ್ಮಲ್ಲಿ ಕೃಪೆಯಿಡು

HanumanChalisaPath.CoM

**ಯಹ ಶತವಾರ ಪಾಠ ಕರ ಜೋಯೀ ।**
**ಛೂಟಹಿ ಬಂದಿ ಮಹಾಸುಖ ಹೋಯೀ ॥ ೩೮ ॥**

**ಅರ್ಥ :** ಇದನ್ನು ಯಾರು ನೂರು ಬಾರಿ ಪಠಣ ಮಾಡುವವರೋ ಅವರು ಭವ ಬಂಧನಗಳಿಂದ ಬಿಡುಗಡೆ ಹೊಂದಿ ಮಹಾ ಸುಖವನ್ನು ಪಡೆಯುವರು

**ಜೋ ಯಹ ಪಢೈ ಹನುಮಾನ ಚಾಲೀಸಾ ।**
**ಹೋಯ ಸಿದ್ಧಿ ಸಾಖೀ ಗೌರೀಸಾ ॥ ೩೯ ॥**

**ಅರ್ಥ :** ಈ ಸ್ತೋತ್ರ ಹನುಮಾನ ಚಾಲೀಸಾವನ್ನು ಯಾರು ಪಠಣ ಮಾಡುತ್ತಾರೋ ಅವರಿಗೆ ಸಕಲ ಸಿದ್ಧಿಗಳು ಲಭಿಸುತ್ತವೆ ಎಂಬುದಕ್ಕೆ ಶಂಕರನೇ ಸಾಕ್ಷಿ

HanumanChalisaPath.CoM

**ತುಲಸೀದಾಸ ಸದಾ ಹರಿ ಚೇರಾ ।**
**ಕೀಜೈ ನಾಥ ಹೃದಯ ಮಹ ಡೇರಾ ॥ ೪೦ ॥**

**ಅರ್ಥ :** ಈ ಹನುಮಾನ ಚಾಲೀಸಾವನ್ನು ರಚಿಸಿದ ಹರಿಯ ದಾಸರಾದ ತುಲಸಿದಾಸರು ಎಲೈ ಸ್ವಾಮಿಯೇ ಸದಾ ನನ್ನ ಹೃದಯದಲ್ಲಿ ನೆಲಸು ಎಂದು ಪ್ರಾರ್ಥಿಸುತ್ತಾರೆ

## ದೋಹಾ

**ಪವನತನಯ ಸಂಕಟ ಹರಣ**
**ಮಂಗಳ ಮೂರತಿ ರೂಪ ॥**
**ರಾಮ ಲಖನ ಸೀತಾ ಸಹಿತ**
**ಹೃದಯ ಬಸಹು ಸುರ ಭೂಪ ॥**

**ಅರ್ಥ :** ವಾಯುಪುತ್ರನೇ ಸಂಕಟ ಮೋಚಕನೆ ಮಂಗಳಮಯ ರೂಪ ಹೊಂದಿದ ಮೂರ್ತಿಯೇ ರಾಮಲಕ್ಷಣ ಸಮೇತನಾಗಿ ನನ್ನ ಹೃದಯದಲ್ಲಿ ನೆಲಸು

HanumanChalisaPath.CoM

## ಮಂಗಳಂ

Downloaded From HanumanChalisaPath.CoM